



ಗುರುತು ಹೊತ್ತ ಹಲವರು ಅವಳು ಮಾಡುವ ಕೆಲಸವನ್ನೂ, ಮಾಡಬಾರದ ಕೆಲಸವನ್ನೂ ಮಾಡುತ್ತಿರುತ್ತಾರೆ. ಅಪಾರ ಜನಮನ್ನಣೆ ಗಳಿಸಿದ ಇನ್ನೊಂದು ಸಿನಿಮಾ 'ಮಾಟ್ರಿಕ್ಸ್' ಬಂದದ್ದು ಕೂಡಾ ಅದೇ ದಶಕದಲ್ಲಿ. ಮಾನವ ಹಾಗೂ ಯಂತ್ರಮಾನವರ ನಡುವಿನ ಸಂಘರ್ಷದ ಕಥೆಯಿತ್ತು ಅದರಲ್ಲಿ. ಮೆದುಳನ್ನು ಸಿಮ್ಯುಲೇಟ್ ಮಾಡುವ ಮುಖೇನ ಮನುಷ್ಯನಿಗೆ ಭ್ರಮಾಲೋಕವೊಂದನ್ನು ಯಂತ್ರಗಳು ಕಟ್ಟಿಕೊಡುತ್ತವೆ. ಆ ವರ್ಚುಅಲ್ ಜಗತ್ತಿನಲ್ಲಿ ಆತ ಆರಾಮದಲ್ಲಿ ಜೀವಿಸುತ್ತಿರುವಂತೆ ಕಣ್ಕಟ್ಟಿ, ಅವನ ದೇಹದಲ್ಲಿಯ ಶಕ್ತಿಯನ್ನೆಲ್ಲ ಅವನರಿವಿಗೆ ಬಾರದಂತೆ ಹೀರಿ ಬಳಸಿಕೊಳ್ಳುತ್ತವೆ ಅದೇ ಯಂತ್ರಜೀವಿಗಳು. ಆ ಕಾಲಕ್ಕೆ ಕೇವಲ ರೋಚಕ ಸೈನ್ಸ್ ಫಿಕ್ಷನ್‌ಗಳೆನಿಸಿದ್ದ ಈ ಚಲನಚಿತ್ರಗಳು ಇವತ್ತಿಗೆ ಹೆಚ್ಚೆಚ್ಚು ಪ್ರಸ್ತುತವೆನಿಸುತ್ತಿವೆ.

ಇಂದು, ರಿಯಲ್ ಹಾಗೂ ವರ್ಚುಅಲ್ ಜಗತ್ತಿನ ನಡುವಿನ ಗೆರೆ ದಿನದಿಂದ ದಿನಕ್ಕೆ ಸಣ್ಣದಾಗುತ್ತಿರುವ ಸೋಜಿಗವನ್ನು ನಾವು ಗಂಭೀರವಾಗಿ ಗಮನಿಸಬೇಕಿದೆ. ಇನ್ನೊಂದು ಅರ್ಥದಲ್ಲಿ ಇದು ಫಿಸಿಕಲ್ ಲೋಕದ ಜೊತೆ ಡಿಜಿಟಲ್ ಲೋಕ ನಡೆಸುತ್ತಿರುವ ಪೈಪೋಟಿ. ಈ ಡಿಜಿಟಲ್ ಲೋಕದ ಮೋಡಿಯೇ ಅಂಥದ್ದು. ಅಲ್ಲಿ ನಿಜದ ಜಗತ್ತಿನಂತೆ ಕೇವಲ ಒಂದೇ ಲೋಕವಿಲ್ಲ. ನಿಮಗೆ ಬೇಕಾದಷ್ಟು ಲೋಕವನ್ನು ನಿಮ್ಮಿಷ್ಟಕ್ಕೆ ಅನುಸಾರ ಕಟ್ಟಿಕೊಳ್ಳಬಹುದು. ಅಲ್ಲಿ ಕೃಷ್ಣನ ಅವತಾರವನ್ನು ವಿಷ್ಣುವೇ ಎತ್ತಬೇಕಂತಿಲ್ಲ. ಯಾರ ಅವತಾರವನ್ನು ಯಾರೂ ಎತ್ತಬಹುದು. ಆ ಅವತಾರಕ್ಕೆ ಆದಿ ಅಂತ್ಯ ಎಂಬುದೂ ಇಲ್ಲ. ವಾಸ್ತವ ಜಗತ್ತಿನಲ್ಲಿ ವ್ಯಕ್ತಿಯೊಬ್ಬನಿಗೆ ಸಿಗದೇ ಇರುವ ಅಥೆಂಟಿಸಿಟಿಯನ್ನು ಆ ಲೋಕ ಸೃಷ್ಟಿಸಿಕೊಡುತ್ತದೆ. ಹಲವು ಪರಿಕರಗಳ ಮೂಲಕ ನೀನು ನೀನೇ ಎಂಬ ಖಚಿತತೆಯನ್ನು ಅದು ಪ್ರತಿಯೊಬ್ಬನಿಗೂ ನೀಡುತ್ತದೆ. ನಿಮಗೊಂದು ಸಮುದಾಯವನ್ನೂ, ಅಲ್ಲೊಂದು ಪ್ರಾಮುಖ್ಯತೆಯನ್ನೂ ದಕ್ಕಿಸಿಕೊಡುತ್ತದೆ. ಅಷ್ಟೇ ಯಾಕೆ, ನಿಮ್ಮಲ್ಲೊಂದು ಸಾಮರ್ಥ್ಯವಿದೆ, ಅನೇಕರು ನಿಮ್ಮನ್ನೇ ಹಿಂಬಾಲಿಸುತ್ತಿದ್ದಾರೆ, ಅವಲಂಬಿಸಿದ್ದಾರೆ ಎನ್ನುವಂಥ ಇನ್ನೂ ಅನೇಕ ಹೆಗ್ಗಳಿಕೆಯ ಭಾವವೂ ನಿಮಗಲ್ಲಿ ದಂಡಿಯಾಗಿ ಸಿಗಬಹುದು. ಇನ್ನೇನು ಬೇಕು?

ವಿಪರ್ಯಾಸವೆಂದರೆ, 'ಅವನು ಅವನೇ' ಎಂಬ ಖಚಿತತೆಯ ನಡುವೆ, ಆ ಅವನು